ಒಂದು ನನ್ನೆದುರೇ ಅವುಗಳನ್ನು ಗಾಳಿಗೆ ತೂರಿದ್ದೂ ಆಯಿತು. ಅಷ್ಟಕ್ಕೂ ಆಸಕ್ತಿ ಅಭಿರುಚಿಯನ್ನು ಯಾರದ್ದಾದರೂ ತಲೆಯೊಳಗೆ ಬಲವಂತವಾಗಿ ತುಂಬಲು ಹೇಗೆ ಸಾಧ್ಯ? ಸುಮ್ಮನಾಗಲಾರದ ಮನಸಿನಿಂದ ಪೂರಾ ತರಗತಿಯಿಂದಾದರೂ ಒಂದಷ್ಟು ಗರಿಗಳನ್ನು ಸಂಗ್ರಹಿಸಿಕೊಂಡು ಒಂದೇ ಒಂದು ಸಂಗ್ರಹವನ್ನಾದರೂ ಮಾಡಿ ಎಂದು ಹೇಳಿ, ಮಾಡಿಸಿ ತಣ್ಣಗಾದೆ. ಇಲ್ಲಿ ಈ ಸಂಗ್ರಹಕಾರ್ಯದಿಂದ ಯಾವ ಪ್ರಯೋಜನವೂ ಆಗಲಿಲ್ಲವೆಂದು ಸಣ್ಣದಾಗಿ ಬೇಸರವಾಯಿತಷ್ಟೇ... ಇದೆಲ್ಲ ಆಗಿ ಎರಡು ದಿನದ ತರುವಾಯ ಊಟದ ವೇಳೆಯಲ್ಲಿ ನಾನು ಸ್ಟಾಫ್ ರೂಮಿನಲ್ಲಿದ್ದಾಗ ರಮ್ಯಾ ತನ್ನದೊಂದು ಪುಸ್ತಕ ಹಿಡಿದು ಹಿಂಜರಿಯುತ್ತಾ ಬಂದು ನನ್ನ ಮುಂದೆ ತನ್ನ ಪುಸ್ತಕ ಹಿಡಿದು ಮುಂದೆ ಚಾಚಿದಳು. ನನಗೆ ಕುತೂಹಲ. ನಿಧಾನವಾಗಿ ಮೊದಲ ಪುಟ ತಿರುಗಿಸಿದೆ. ಅರೆ, ಏನಾಶ್ಚರ್ಯ! ಅವಳ ಪುಸ್ತಕದ ತುಂಬೆಲ್ಲಾ ನಾನಾ ಬಗೆಯ ನಾನಾ ಆಕಾರದ ಬಣ್ಣ ಬಣ್ಣದ ಸುಂದರ ಹಕ್ಕಿಪುಚ್ಚಗಳು. ಬೆರಗಾಗಿಬಿಟ್ಟೆ. ಕೊನೆಗೂ ನನ್ನ ಪ್ರಯತ್ನ ಸಫಲವಾಗಿತ್ತು. ರಮ್ಯಾ ನಿಜಕ್ಕೂ ಚೆಂದದ ಸಂಗ್ರಹ ಮಾಡಿದ್ದಳು. 'ಯಾಕೆ ಇಷ್ಟು ದಿನ ತರಲಿಲ್ಲ' ಎಂದು ಕೇಳಿದೆ. ಅದಕ್ಕೆ ಆ ಹುಡುಗಿ 'ಮಿಸ್ ನನಗೂ ಈ ಗರಿಗಳಂದ್ರೆ ತುಂಬ ಇಷ್ಟ... ಶಾಲೆಗೆ ತಂದುಕೊಟ್ರೆ ನನಗಿಲ್ದಂಗೆ ಆಗುತ್ತಲ್ಲ ಮಿಸ್...' ಎಂದಿತು. 'ನಿಮ್ ಡೈರಿ ನೋಡಿದ ಮೇಲೆ ನಂಗೂ ಅಂಥದ್ದೇ ಡೈರಿ ಬೇಕು ಅನಿಸ್ತು, ಅದಕ್ಕೆ ಇದನ್ನ ಮಾಡ್ಕೊಂಡೆ ಮಿಸ್...' ಎಂದವಳು ಹೇಳಿದಾಗ ನನಗಂತೂ ಖುಷಿಯಿಂದ ಮಾತೇ ಹೊರಡಲಿಲ್ಲ... ಗಟ್ಟಿಯಾಗಿ ತಬ್ಬಿಕೊಂಡೆ. ಅಷ್ಟಕ್ಕೂ ನಾ ಬಯಸಿದ್ದದ್ದು ಇದನ್ನೇ ಅಲ್ಲವೆ?

ಈಗಂತೂ ಗರಿಗಳನ್ನು ನಾನಾ ಮಾರ್ಗಗಳಲ್ಲಿ ನಾನಾ ಮಾದರಿಯಲ್ಲಿ ಬಳಸುತ್ತಿದ್ದಾರೆ. ಅಲಂಕಾರದ ಆವರಣಕ್ಕೂ ಗರಿಗಳು ಕಾಲಿಟ್ಟಾಗಿದೆ. ಮೊನ್ನೆ ಮಾರುಕಟ್ಟೆಯಲ್ಲಿ ನವಿಲುಗರಿಯ

